# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1036 (1118)
2. ಸದಸ್ಯರ ಹೆಸರು : ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ : 17.03.2025
4. ಉತ್ತರಿಸಬೇಕಾದ ಸಚಿವರು : ವೈದ್ಯಕೀಯ ಶಿಕ್ಷಣ ಸಚಿವರು

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| (ಅ) | ಚಿಕ್ಕಮಗಳೂರು ಜಿಲ್ಲಾಸ್ಪತ್ರೆಯ ಉನ್ನತೀಕರಣ ಕಾಮಗಾರಿಯನ್ನು ಪ್ರಾರಂಭಿಸಿದ್ದು ಯಾವಾಗ; ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ; ಇದರ ಅಂದಾಜು ಮೊತ್ತ ಎಷ್ಟು; | ಚಿಕ್ಕಮಗಳೂರು ಜಿಲ್ಲಾಸ್ಪತ್ರೆಯ ಉನ್ನತೀಕರಣ ಕಾಮಗಾರಿಯನ್ನು ದಿನಾಂಕ:09.09.2021ರಿಂದ ಪ್ರಾರಂಭಿಸಲಾಗಿರುತ್ತದೆ. ಸದರಿ ಜಿಲ್ಲಾಸ್ಪತ್ರೆಯ ಉನ್ನತೀಕರಣ ಭಾಗವಾಗಿ ಜಿಲ್ಲಾಸ್ಪತ್ರೆಯಲ್ಲಿರುವ ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ಕಟ್ಟಡದ ಶೌಚಾಲಯಗಳನ್ನು ನವೀಕರಣಗೊಳಿಸಲಾಗಿದ್ದು, ಕಟ್ಟಡದ ಹೊರಭಾಗ ಮತ್ತು ಒಳಭಾಗಕ್ಕೆ ಬಣ್ಣ ಬಳಿಯುವ ಕೆಲಸ ಮಾಡಲಾಗಿರುತ್ತದೆ. ಕಟ್ಟಡದ ಮಂಗಳೂರು ಟೈಲ್ಸ್ ರೂಫ್ ಬ್ಲಾಕ್‌ಗಳನ್ನು ಹೊರತುಪಡಿಸಿ ಉಳಿದ ಬ್ಲಾಕ್‌ಗಳಿಗೆ ಜಲನಿರೋಧಕ ಪದರವನ್ನು ಅಳವಡಿಸಲಾಗಿರುತ್ತದೆ.<br><br>ಅದೇ ರೀತಿ ಜಿಲ್ಲಾಸ್ಪತ್ರೆಯಲ್ಲಿರುವ ಮಕ್ಕಳ ಆಸ್ಪತ್ರೆ ವಿಭಾಗ, ಕಣ್ಣಿನ ಆಸ್ಪತ್ರೆ ವಿಭಾಗ, ಫಿಜಿಯೊಥೆರಪಿ ವಿಭಾಗ, ವೈದ್ಯರ ವಿಶ್ರಾಂತಿ ಕೊಠಡಿ ಕಟ್ಟಡ ಹಾಗೂ ಒಳರೋಗಿಗಳ ವಿಭಾಗದ ಕಟ್ಟಡದ ಶೌಚಾಲಯಗಳನ್ನು ನವೀಕರಣಗೊಳಿಸಲಾಗಿದ್ದು, ಕಟ್ಟಡದ ಹೊರಭಾಗ ಮತ್ತು ಒಳಭಾಗಕ್ಕೆ ಬಣ್ಣ ಬಳಿಯುವ ಕೆಲಸ ಕೈಗೊಳ್ಳಾಗಿದ್ದು, ಸದರಿ ವಿಭಾಗಗಳ ಕಟ್ಟಡಕ್ಕೆ ವಿದ್ಯುದೀಕರಣ ಹಾಗೂ ನೀರಿನ ಸರಬರಾಜು ಮತ್ತು ನೈರ್ಮಲ್ಯೀಕರಣ ಕಾಮಗಾರಿಯನ್ನು ಕೈಗೊಳ್ಳಲಾಗಿರುತ್ತದೆ.<br><br>ಜಿಲ್ಲಾಸ್ಪತ್ರೆಯಲ್ಲಿರುವ ಫೋರೆನ್ಸಿಕ್ ಕಟ್ಟಡವನ್ನು ಅಡುಗೆ ಮನೆ ಹಾಗೂ ಸ್ಟೋರ್ ರೂಮ್ ಆಗಿ ಮಾರ್ಪಡಿಸಲಾಗಿರುತ್ತದೆ. ಇದರ ಸಂಬಂಧ ಕಟ್ಟಡವನ್ನು ನವೀಕರಣಗೊಳಿಸಲಾಗಿರುತ್ತದೆ.<br><br>ಜಿಲ್ಲಾಸ್ಪತ್ರೆಯಲ್ಲಿರುವ ಆಡಳಿತ ವಿಭಾಗ ಹಾಗೂ ಒಪಿಡಿ ವಿಭಾಗದ ಕಟ್ಟಡಕ್ಕೆ ಹೊರಭಾಗ ಮತ್ತು ಒಳ ಭಾಗದ ಬಣ್ಣ ಬಳಿಯುವ ಕಾಮಗಾರಿ ಕೈಗೊಳ್ಳಲಾಗಿರುತ್ತದೆ. ಕಟ್ಟಡದ ಆಡಳಿತ ವಿಭಾಗದ ಟೆರಸ್ ಫ್ಲೋರ್‌ಗೆ ಜಲನಿರೋಧಕ ಪದರ ಅಳವಡಿಸಲಾಗಿರುತ್ತದೆ. |

| | | |
|---|---|---|
| | | ಜಿಲ್ಲಾಸ್ಪತ್ರೆಯಲ್ಲಿರುವ ಕ್ಷಯರೋಗ ಹಾಗೂ ಸಿ.ಟಿ ಸ್ಕ್ಯಾನ್ ವಿಭಾಗದ ಕಟ್ಟಡಕ್ಕೆ ಹೊರ ಭಾಗ ಮತ್ತು ಒಳ ಭಾಗದ ಬಣ್ಣ ಬಳಿಯುವ ಕಾಮಗಾರಿ ಕೈಗೊಳ್ಳಲಾಗಿರುತ್ತದೆ.<br><br>ಜಿಲ್ಲಾಸ್ಪತ್ರೆಯಲ್ಲಿರುವ ಅಡುಗೆಮನೆ ಹಾಗೂ ಡಯಾಲಿಸೀಸ್ ವಿಭಾಗದ ಕಟ್ಟಡವನ್ನು ತುರ್ತು ನಿಗಾ ಘಟಕವನ್ನಾಗಿ ಮಾರ್ಪಾಡಿಸಿ ನವೀಕರಣಗೊಳಿಸಲಾಗಿರುತ್ತದೆ.<br><br>ಜಿಲ್ಲಾಸ್ಪತೆಯಲ್ಲಿರುವ ಮಾರ್ಚುರಿ ಬ್ಲಾಕ್‌ನ್ನು ನವೀಕರಣಗೊಳಿಸಲಾಗಿರುತ್ತದೆ. ಸದರಿ ಕಟ್ಟಡದ ಸ್ಟೋರ್ ಬ್ಲಾಕ್‌ನ್ನು ಡಿಸೆಕ್ಷನ್ ಬ್ಲಾಕ್ ಗೆ ನವೀಕರಣಗೊಳಿಸಲಾಗಿರುತ್ತದೆ. ಜಿಲ್ಲಾಸ್ಪತ್ರೆ ಆವರಣದಲ್ಲಿದ್ದ ಹಳೆಯ ವಸತಿ ಗೃಹಗಳ ಕಟ್ಟಡವನ್ನು ನೆಲಸಮಗೊಳಿಸಿ, ಹೊಸದಾಗಿ ಹೊರರೋಗಿಗಳ ವಿಭಾಗ ಕಟ್ಟಡವನ್ನು ನಿರ್ಮಾಣ ಮಾಡಲಾಗಿರುತ್ತದೆ. ಸದರಿ ಕಟ್ಟಡವು 3 ಅಂತಸ್ತುಗಳನ್ನು ಒಳಗೊಂಡಿರುತ್ತದೆ.<br><br>ಹೀಗೆ ಜಿಲ್ಲಾಸ್ಪತೆಯನ್ನು ಉನ್ನತೀಕರಣಗೊಳಿಸುವ ಎಲ್ಲಾ ಕಾಮಗಾರಿಗಳ ಒಟ್ಟಾರೆ ಅಂದಾಜು ಮೊತ್ತವು ರೂ.20.00 ಕೋಟಿಗಳಾಗಿರುತ್ತದೆ. |
| (ಆ) | ಈ ಕಾಮಗಾರಿಗಳಿಗಾಗಿ ಇದುವರೆಗೂ ಎಷ್ಟು ವೆಚ್ಚ ಮಾಡಲಾಗಿದೆ; (ಕಾಮಗಾರಿವಾರು ವಿವರ ನೀಡುವುದು) | ಜಿಲ್ಲಾಸ್ಪತ್ರೆಯ ಉನ್ನತೀಕರಣ ಮತ್ತು ದುರಸ್ಥಿ ಕಾಮಗಾರಿಗಳಿಗೆ ರೂ.5,01,20,916.00ಗಳು ಹಾಗೂ ಹೊಸದಾಗಿ ನಿರ್ಮಾಣ ಮಾಡಿರುವ ಓಪಿಡಿ ಬ್ಲಾಕ್‌ಗೆ ರೂ.11,63,57,727.00ಗಳು ಸೇರಿದಂತೆ ಒಟ್ಟಾರೆಯಾಗಿ ಇದುವರೆಗೂ ರೂ.16,64,78,643.45 ಕೋಟಿಗಳನ್ನು ವೆಚ್ಚ ಮಾಡಲಾಗಿದೆ. |
| (ಇ) | ಜಿಲ್ಲಾಸ್ಪತ್ರೆ ಆವರಣದಲ್ಲಿ ಹೊಸದಾಗಿ ನಿರ್ಮಿಸಲಾಗಿರುವ ಓಪಿಡಿ ಬ್ಲಾಕ್ ಕಟ್ಟಡ ಪೂರ್ಣಗೊಂಡಿದೆಯೆ; | ಪೂರ್ಣಗೊಂಡಿದೆ.<br><br>ಸದರಿ ಕಟ್ಟಡದ ಹಸ್ತಾಂತರ ಪ್ರಕ್ರಿಯೆ ಚಾಲ್ತಿಯಲ್ಲಿದ್ದು, ಕಟ್ಟಡವನ್ನು ಹಸ್ತಾಂತರಿಸಿದ ನಂತರ ಉಪಯೋಗಿಸಿಕೊಳ್ಳಲಾಗುವುದು. |
| (ಈ) | ಪೂರ್ಣಗೊಂಡಿದ್ದಲ್ಲಿ, ಇದನ್ನು ಉಪಯೋಗಿಸದಿರಲು ಕಾರಣಗಳೇನು? | |

**ಸಂಖ್ಯೆ:** ಎಂಇಡಿ 141 ಎಂಎಂಸಿ 2025

**(ಡಾ. ಶರಣಪ್ರಕಾಶ ಆರ್. ಪಾಟೀಲ)**
ವೈದ್ಯಕೀಯ ಶಿಕ್ಷಣ ಹಾಗೂ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು.